\

# ಪಶ್ಚಿಮ ವಲಯ ವ್ಯಾಪ್ತಿಯ, ಮಲ್ಲೇಶ್ವರಂ ಉಪವಿಭಾಗದ ಕಾಡುಮಲ್ಲೇಶ್ವರ ವಾರ್ಡ್–65ರಲ್ಲಿ ಆನ್‌ಲೈನ್ (Zoom App) ಮೂಲಕ ದಿನಾಂಕ: 24–09–2021 ರಂದು, ನಡೆದ ವಾರ್ಡ್ ಸಮಿತಿ ಸಭೆಯ

## ಸಭಾ ನಡವಳಿಗಳು.

ವಾರ್ಡ್ ಸಂಖ್ಯೆ–65 ಕಾಡುಮಲ್ಲೇಶ್ವರ

ಸಮಯ ಬೆಳಿಗ್ಗೆ 11:00 ಘಂಟೆಗೆ

ದಿನಾಂಕ: 24–09–2021 ರಂದು ವಾರ್ಡ್ ಸಂಖ್ಯೆ:65ರ ಸೆಪ್ಟೆಂಬರ್ ಮಾಹೆಯ ವಾರ್ಡ್ ಸಮಿತಿ ಸಭೆಯು ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಆನ್‌ಲೈನ್ (Zoom App) ಮೂಲಕ ಭಾಗವಹಿಸಿದ್ದರು. ವಾರ್ಡ್ ಸಂಖ್ಯೆ: 65ರ ಸಹಾಯಕ ಅಭಿಯಂತರರು ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದು ಎಲ್ಲರಿಗೂ ಸ್ವಾಗತವನ್ನು ಕೋರಿದರು ಹಾಗೂ ಸದಸ್ಯರುಗಳೆಲ್ಲರ ಕಿರು ವಿವರ ತಿಳಿಸಿ, ಮಾಸ್ಕ್ ಧರಿಸಿ ಸಾಮಾಜಿಕ ಅಂತರ ಕಾಯ್ದುಕೊಂಡು ಸಭೆ ನಡೆಸಲು ಕೋರಿದರು.

ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

- ಆರೋಗ್ಯ ವೈದ್ಯಾಧಿಕಾರಿ (ಮಲ್ಲೇಶ್ವರಂ) ರವರಾದ ಡಾ// ಸುಚಿತ್ರ ರವರು ಸಭೆಯಲ್ಲಿ ಹಾಜರಿದ್ದು, ವಾರದ 24 ಘಂಟೆಗಳಲ್ಲಿ ಕಬಡಿ ಆಟದ ಮೈದಾನದಲ್ಲಿ ಕೋವಿಡ್–19 ಲಸಿಕೆಯನ್ನು ನೀಡುತ್ತಿರುವುದನ್ನು ತಿಳಿಸಿ ಪಡೆದುಕೊಳ್ಳಬೇಕೆಂದು ಸಭೆಯಲ್ಲಿ ಕೋರಿರುತ್ತಾರೆ.
- ಗಾಂಧಿಗ್ರಾಮ ಆರೋಗ್ಯ ಕೇಂದ್ರದ ವೈದ್ಯರುಗಳಾದ ಡಾ//ಲಾವಣ್ಯ ಸಭೆಯಲ್ಲಿ ಹಾಜರಿದ್ದು, ಆರೋಗ್ಯ ಕೇಂದ್ರದಲ್ಲಿ ಯಾವುದೇ ರೀತಿಯ ತೊಂದರೆ ಇಲ್ಲದೆ ಪ್ರತಿನಿತ್ಯ ಕೋವಿಡ್–19 ಲಸಿಕೆ ನೀಡುತ್ತಿರುವುದಾಗಿ ಆರೋಗ್ಯ ಅಧಿಕಾರಿಗಳು ಸಭೆಗೆ ತಿಳಿಸಿರುತ್ತಾರೆ.
- ಎಸ್.ಡಬ್ಲ್ಯೂ.ಡಿ ಇಲಾಖೆಯ ಸಹಾಯಕ ಅಭಿಯಂತರರಾದ ಶಿಲ್ಪ ರವರು ಸಭೆಯಲ್ಲಿ ಹಾಜರಿದ್ದು, 11ನೇ ಮುಖ್ಯರಸ್ತೆ, ವೆಸ್ಟ್ ಪಾರ್ಕ್ ರಸ್ತೆ ಹಾಗೂ 16ನೇ ಅಡ್ಡರಸ್ತೆಯಲ್ಲಿ ನಡೆಯುತ್ತಿರುವ ಕಾಮಗಾರರಿಗಳ ನ್ಯೂನ್ಯತೆಗಳನ್ನು ಸರಿಪಡಿಸಿ ಕಾಮಗಾರಿಗಳನ್ನು ಪೂರ್ಣಗೊಳಿಸುವುದಾಗಿ ಸಭೆಗೆ ತಿಳಿಸಿರುತ್ತಾರೆ.
- ಆರೋಗ್ಯ ಇಲಾಖೆಯ ಕಿರಿಯ ಆರೋಗ್ಯ ಪರಿವೀಕ್ಷರಾದ ಶ್ರೀ ವೆಂಕಟೇಶ್ ರವರು ಸಭೆಯಲ್ಲಿ ಹಾಜರಿದ್ದು, ಸಾರ್ವಜನಿಕರು ಕೇಳಿದ್ದ ಕಸ ವಿಂಗಡಣೆ ಮಾಡಿ ಹಸಿ ಮತ್ತು ಒಣ ಕಸವನ್ನು ವಾರದ ಯಾವ ದಿನಗಳಲ್ಲಿ ತೆಗೆಯುವುದಾಗಿ ಕೇಳಿರುತ್ತಾರೆ. ಶ್ರೀ ವೆಂಕಟೇಶ್ ರವರು ಬುಧವಾರ ಮತ್ತು ಶನಿವಾರದಂದು ಒಣ ಕಸವನ್ನು, ವಾರದ ಉಳಿದ ದಿನಗಳಲ್ಲಿ ಹಸಿ ಕಸವನ್ನು ತೆಗೆಯುವುದಾಗಿ ತಿಳಿಸಿರುತ್ತಾರೆ. ಅದರೆ ಸಭೆಯಲ್ಲಿ 6ನೇ ಮುಖ್ಯರಸ್ತೆ & 9ನೇ ಅಡ್ಡರಸ್ತೆ ಹಾಗೂ ಮನೆ ಮನೆಗಳಲ್ಲಿ ಸರಿಯಾಗಿ ಕಸವನ್ನು ವಿಂಗಡಣೆ ಮಾಡುವುದಿಲ್ಲವೆಂದು ತಿಳಿಸಿರುತ್ತಾರೆ. ಅದಕ್ಕೆ ಶ್ರೀ ವೆಂಕಟೇಶ್ ರವರು ಕಸವನ್ನು ತೆಗೆಸುವುದಾಗಿ ಸಭೆಗೆ ಹೇಳಿರುತ್ತಾರೆ. ಘನ ತ್ಯಾಜ್ಯ ಉಪವಿಭಾಗದ ಶ್ರೀಮತಿ ರೇಖಾ ರವರನ್ನು ಮುಂದಿನ ವಾರ್ಡ್ ಸಭೆಗೆ ಹಾಜರಾಗಲು ತಿಳಿಸಿರುತ್ತಾರೆ.

Scanned with CamScanner

- ಸಂಚಾರಿ ಪೊಲೀಸ್ ಇಲಾಖೆಯಿಂದ ಶ್ರೀ ಧನಂಜಯ್‌ಕುಮಾರ್ ರವರು ಸಭೆಯಲ್ಲಿ ಹಾಜ ಸಾರ್ವಜನಿಕರು ಕೇಳಿದ ಪ್ರಶ್ನೆಗಳಾದ 9ನೇ ಅಡ್ಡರಸ್ತೆ, 4ನೇ ಮುಖ್ಯರಸ್ತೆ, ಹಾಗೂ ಮಾರ್ಗೋಸಾ ರ ಪಾದಚಾರಿ ಮಾರ್ಗದಲ್ಲಿ ನಿಲ್ಲಿಸಿರುವ ಗಾಡಿಗಳನ್ನು ತೆಗೆಸಲು ತಿಳಿಸಿರುತ್ತಾರೆ. ಹಾಗೂ ಮಾರ್ಗೋ ರಸ್ತೆಯಲ್ಲಿ ವೇಗ ನಿಯಂತ್ರಕಗಳನ್ನು (Speed Breack) ಮಾರ್ಗಸೂಚಿ ಫಲಕಗಳನ್ನು ಅಳವಡಿ ತಿಳಿಸಿರುತ್ತಾರೆ. ಇದಕ್ಕೆ ಶ್ರೀ ಧನಂಜಯ್‌ಕುಮಾರ್ ರವರು ಟೆಂಡರ್ ಶ್ಯೂರ್ ಇಲಾಖೆಯ ನಿರ್ವಹಿಸುವುದಾಗಿ ಸಭೆಗೆ ತಿಳಿಸಿರುತ್ತಾರೆ.
- ಮಾರ್ಗೋಸಾ ರಸ್ತೆಯ ಬಗ್ಗೆ ಸಭೆಯಲ್ಲಿ ಕೇಳಿದ ಪ್ರಶ್ನೆಗಳಿಗೆ ಟೆಂಡರ್ ಸ್ಯೂರ್ ರಸ್ತೆಯ ಸಹಾಯ ಕಾರ್ಯಪಾಲಕ ಅಭಿಯಂತರರು ಶ್ರಿ ನಾಗರಾಜ್ ರವರು ಸಭೆಯಲ್ಲಿ ಹಾಜರಿದ್ದು ಬೆಸ್ಕಾಂ ಇಲಾಖೆಯವರು ಅಳವಡಿಸಬೇಕಾದ ಮೀಟರ್ ಬಗ್ಗೆ ಬೆಸ್ಕಾಂ ಇಲಾಖೆಯವರೊಂದಿಗೆ ಚರ್ಚಿಸಿ ಅಳವಡಿಸುವುದಾಗಿ ಹೇಳಿರುತ್ತಾರೆ. ಹಾಗೂ ಕಾಮಗಾರಿಯ ನ್ಯೂನ್ಯತೆಗಳನ್ನು ಸರಿಪಡಿಸಿರುವುದಾಗಿ ತಿಳಿಸುತ್ತಾ, ಸಂಚಾರಿ ಇಲಾಖೆಯವರು ಸೂಚಿಸಿರುವಂತೆ ರಸ್ತೆಯಲ್ಲಿ ವೇಗ ನಿಯಂತ್ರಕಗಳನ್ನು (Speed Breack) ಮಾರ್ಗಸೂಚಿ ಫಲಕಗಳನ್ನು ಅಳವಡಿಸುವುದಾಗಿ ಸಭೆಗೆ ತಿಳಿಸಿರುತ್ತಾರೆ.
- ಬೆಸ್ಕಾಂ ಇಲಾಖೆಯವರಾದ ಶ್ರೀ ಮಂಜುನಾಥ್ ರವರು ಸಭೆಯಲ್ಲಿ ಹಾಜರಿದ್ದು, ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸುವುದಾಗಿ ಸಭೆಗೆ ತಿಳಿಸಿರುತ್ತಾರೆ.
- ಅರಣ್ಯ ಇಲಾಖೆಯವರು ಸಾರ್ವಜನಿಕರು ಕೇಳಿದ ಪ್ರಶ್ನೆಗಳಿಗೆ ಅನವಶ್ಯಕವಾಗಿ ಯಾವುದೇ ರೀತಿಯ ಮರಗಳನ್ನು ತೆಗೆಯುವುದಿಲ್ಲವೆಂದು ಸಭೆಗೆ ತಿಳಿಸುತ್ತಾ, ಈಗಾಗಲೇ ಬಿದ್ದಿರುವ ಮರಗಳನ್ನು ನೋಡಿ ತೆರವುಗೊಳಿಸುವುದಾಗಿ ತಿಳಿಸಿರುತ್ತಾರೆ.
- ನೋಡಲ್ ಅಧಿಕಾರಿಯವರಾದ ಶ್ರೀ ಇಂದ್ರಕುಮಾರ್ ರವರು ಸಭೆಗೆ ಗೈರುಹಾಜರಾದ ಬಿ.ಡಬ್ಲ್ಯೂ.ಎಸ್.ಎಸ್.ಬಿ, ಪೊಲೀಸ್ ಕಾನೂನು ಸುವ್ಯವಸ್ಥೆ, ತೋಟಗಾರಿಕೆ ಇಲಾಖೆ, ಪಶು ಸಂಗೋಪನಾ ಇಲಾಖೆ ಮತ್ತು ಬೀದಿ ದೀಪ ಇಲಾಖೆಯವರಿಗೆ ನೋಟಿಸ್ ನೀಡಬೇಕೆಂದು ಸಹಾಯಕ ಅಭಿಯಂತರರಿಗೆ ತಿಳಿಸರುತ್ತಾರೆ.

**ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಕಾರ್ಯದರ್ಶಿಯವರು ವಂದಾನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.**

**ಕಾರ್ಯದರ್ಶಿ,**

**ಸಹಾಯಕ ಅಭಿಯಂತರರು, ವಾರ್ಡ್-65**
**ಮಲ್ಲೇಶ್ವರಂ ಉಪ ವಿಭಾಗ, ಬಿಬಿಎಂಪಿ**

Scanned with CamScanner